XXVI **ಶ್ರೀ ಶಿವಣ್ಣನವರ್ ಬಸವರಾಜ್ ನೀಲಪ್ಪ (ಪರಿಸರ, ಜೀವಿ ಪರಿಸ್ಥಿತಿ ಶಾಸ್ತ್ರ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಅಸಂಪ್ರದಾಯಕ ಇಂಧನ ರಾಜ್ಯ ಮಂತ್ರಿ) ಅವರು:-**

ಅಧ್ಯಕ್ಷರೇ 1974ರ ಜಲ (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಅಧಿನಿಯಮದ 40(7)ನೇ ಪ್ರಕರಣದ ಮೇರೆಗೆ;

1993-94 ಹಾಗೂ 1994-95ನೇ ಸಾಲುಗಳ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಲೆಕ್ಕಪತ್ರಗಳ ವರದಿಗಳನ್ನು ಮಂಡಿಸುತ್ತೇನೆ.

7. **ಪ್ರಕಟಣೆ**

ಸಭಾಧ್ಯಕ್ಷರು :

ಕರ್ನಾಟಕ ಕಾಂಗ್ರೆಸ್ ಪಕ್ಷಕ್ಕೆ ಸೇರಿದ ವಿಧಾನ ಸಭಾ ಸದಸ್ಯರುಗಳಾದ ಶ್ರೀಯುತ 1. ಯು.ಆರ್. ಸಭಾಪತಿ, 2. ಎಂ. ಬಸಪ್ಪ, 3. ಎಸ್. ಕುಮಾರ್ ಬಂಗಾರಪ್ಪ, 4. ಹೆಚ್.ಬಿ. ಕೃಷ್ಣಮೂರ್ತಿ ಮತ್ತು 5. ಕೆ.ಎಸ್. ಗದ್ದಿ ಅವರುಗಳು ದಿನಾಂಕ 15-12-96 ರಂದು ನನ್ನನ್ನು ಭೇಟಿಯಾಗಿ ಕರ್ನಾಟಕ ಕಾಂಗ್ರೆಸ್ ಪಕ್ಷವು ಕಾಂಗ್ರೆಸ್ (ಐ) ಪಕ್ಷದೊಂದಿಗೆ ವಿಲೀನಗೊಳ್ಳಲು ನಿರ್ಧರಿಸಿರುವುದರಿಂದ ಇನ್ನು ಮುಂದೆ ಅವರನ್ನು ಕಾಂಗ್ರೆಸ್ (ಐ) ಶಾಸಕಾಂಗ ಪಕ್ಷದ ಸದಸ್ಯರೆಂದು ಪರಿಗಣಿಸಲು ಕೋರಿ ಪತ್ರವನ್ನು ನೀಡಿದರು.

ದಿನಾಂಕ 16-12-1996 ರಂದು ಕಾಂಗ್ರೆಸ್ (ಐ) ಶಾಸಕಾಂಗ ಪಕ್ಷದ ಸಚೇತಕರಾದ ಶ್ರೀ ಮಂಜುನಾಥ್ ಸಿ.ಕುನ್ನೂರ್ ಅವರು ನನ್ನನ್ನು ಭೇಟಿ ಮಾಡಿ ಕರ್ನಾಟಕ ಕಾಂಗ್ರೆಸ್ ಪಕ್ಷವು ಕಾಂಗ್ರೆಸ್ (ಐ) ಪಕ್ಷದೊಂದಿಗೆ ವಿಲೀನಗೊಂಡಿರುವುದರಿಂದ ಹಾಗೂ ವಿಧಾನ ಸಭೆಯಲ್ಲಿ ಐದು ಮಂದಿ ಕರ್ನಾಟಕ ಕಾಂಗ್ರೆಸ್ ಪಕ್ಷದ ಸದಸ್ಯರು ಕಾಂಗ್ರೆಸ್ (ಐ) ಪಕ್ಷವನ್ನು ಸೇರಿರುವುದರಿಂದ, ವಿಧಾನ ಸಭೆಯಲ್ಲಿ ಕಾಂಗ್ರೆಸ್ (ಐ) ಶಾಸಕಾಂಗ ಪಕ್ಷದ ಸದಸ್ಯರ ಬಲ 41ಕ್ಕೆ ಏರಿದ್ದು, ವಿಧಾನ ಸಭೆಯಲ್ಲಿ ಹೆಚ್ಚಿನ ಸಂಖ್ಯಾ ಬಲವುಳ್ಳ ವಿರೋಧ ಪಕ್ಷವಾಗಿರುವುದರಿಂದ ತಮ್ಮ ಪಕ್ಷವನ್ನು ಅಧಿಕೃತ ವಿರೋಧ ಪಕ್ಷವನ್ನಾಗಿ ಪರಿಗಣಿಸಬೇಕೆಂದು ಪತ್ರವನ್ನು ನೀಡಿರುತ್ತಾರೆ.

ಇದರ ಜೊತೆಗೆ ಕರ್ನಾಟಕ ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾದ ಶ್ರೀ ಎಸ್. ಬಂಗಾರಪ್ಪ ಅವರು ಪಕ್ಷದ ಮಟ್ಟದಲ್ಲಿ ತೆಗೆದುಕೊಂಡ ನಿರ್ಣಯವನ್ನು ಬೆಂಬಲಿಸುವ ಅಗತ್ಯ ದಾಖಲೆಗಳನ್ನು ನನಗೆ ಸಲ್ಲಿಸಿರುತ್ತಾರೆ.

ಕರ್ನಾಟಕ ವಿಧಾನ ಸಭೆಯಲ್ಲಿ ಒಬ್ಬ ನಾಮನಿರ್ದೇಶಿತ ಸದಸ್ಯರೂ ಸೇರಿದಂತೆ ಒಟ್ಟು 225 ಸದಸ್ಯ ಬಲವಿದ್ದು, ಪ್ರಸ್ತುತ ಮೂರು ಸ್ಥಾನ ತೆರವಾಗಿರುತ್ತದೆ.

ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ 2(2)ನೇ ನಿಯಮದ ಮೇರೆಗೆ ಯಾವುದೇ ರಾಜಕೀಯ ಪಕ್ಷವು ಸದನದ ಒಟ್ಟು ಸದಸ್ಯರ ಸಂಖ್ಯೆಯ ಹತ್ತನೇ ಒಂದು ಭಾಗಕ್ಕಿಂತ ಕಡಿಮೆ ಇಲ್ಲದಷ್ಟು ಸಂಖ್ಯೆಯ ಸದಸ್ಯರನ್ನು ಹೊಂದಿದ್ದರೆ, ಅಂಥ ಸಂದರ್ಭದಲ್ಲಿ ಆ ರಾಜಕೀಯ ಪಕ್ಷಕ್ಕೆ ವಿರೋಧಪಕ್ಷವೆಂದು ಮಾನ್ಯತೆ ನೀಡಲಾಗುವುದು. ಅಂದರೆ

ವಿರೋಧಪಕ್ಷವೆಂದು ಮಾನ್ಯತೆ ಗಳಿಸಬೇಕಾದರೆ 23ಕ್ಕಿಂತ ಕಡಿಮೆಯಿಂದ ಸದಸ್ಯರಿರಬೇಕಾಗುತ್ತದೆ. ಒಂದಕ್ಕಿಂತ ಹೆಚ್ಚು ಶಾಸಕಾಂಗ ಪಕ್ಷಗಳು ಅಗತ್ಯವಾದ ಅರ್ಹತೆಗಳನ್ನು ಹೊಂದಿದ್ದರೆ ಹೆಚ್ಚಿನ ಸಂಖ್ಯೆಯಲ್ಲಿ ಸದಸ್ಯರುಗಳನ್ನು ಹೊಂದಿರುವಂಥ ಪಕ್ಷಕ್ಕೆ ವಿಧಾನ ಸಭೆಯಲ್ಲಿ ಅಧಿಕೃತ ವಿರೋಧಪಕ್ಷವೆಂದು ಮಾನ್ಯತೆ ನೀಡಲಾಗುವುದು.

ಕರ್ನಾಟಕ ಕಾಂಗ್ರೆಸ್ ಪಕ್ಷದ ಐದು ಸದಸ್ಯರು ನನ್ನ ಮುಂದೆ ಹಾಜರಾಗಿ, ಕಾಂಗ್ರೆಸ್ ಪಕ್ಷದೊಂದಿಗೆ ವಿಲೀನವಾಗಿರುವುದಾಗಿ ಪತ್ರ ನೀಡಿರುವುದರಿಂದ ಭಾರತ ಸಂವಿಧಾನದ ಹತ್ತನೇ ಅನುಸೂಚಿಯ 4ನೇ ಪ್ರಕರಣದ ಉಪಬಂಧಗಳ ಮೇರೆಗೆ ನಾನು ಈ ವಿಲನೀಕರಣಕ್ಕೆ ಸಂಬಂಧಪಟ್ಟ ಮಾನ್ಯತೆಯನ್ನು ಎತ್ತಿಹಿಡಿದಿದ್ದೇನೆ. ಇದರಿಂದಾಗಿ ವಿಧಾನ ಸಭೆಯಲ್ಲಿ 36 ಸದಸ್ಯರನ್ನು ಹೊಂದಿದ್ದ ಕಾಂಗ್ರೆಸ್ (ಐ) ಪಕ್ಷದ ಬಲವು ಈ ಐದು ಜನರ ವಿಲೀನದಿಂದಾಗಿ 41 ಆಗಿರುತ್ತದೆ.

ವಿಧಾನ ಸಭೆಯಲ್ಲಿ ಭಾರತೀಯ ಜನತಾಪಕ್ಷವು 40 ಸದಸ್ಯರನ್ನು ಹೊಂದಿದ್ದು, ಅಧಿಕೃತ ವಿರೋಧಪಕ್ಷದ ಮಾನ್ಯತೆಯನ್ನು ಹೊಂದಿತ್ತು. ಆದರೆ ಈಗ ಬದಲಾದ ಸನ್ನಿವೇಶದಲ್ಲಿ ಕಾಂಗ್ರೆಸ್ (ಐ) ಪಕ್ಷವು ವಿಧಾನ ಸಭೆಯಲ್ಲಿ 41 ಸದಸ್ಯರನ್ನು ಹೊಂದಿರುವುದರಿಂದ ಅಧಿಕೃತ ವಿರೋಧಪಕ್ಷವೆಂದು ಮಾನ್ಯತೆಗೊಳಿಸಲು ಹಕ್ಕುಳ್ಳುದ್ದಾಗಿದೆ.

ಆದುದರಿಂದ ವಿಧಾನ ಸಭೆಯಲ್ಲಿ ಕಾಂಗ್ರೆಸ್ (ಐ) ಶಾಸಕಾಂಗ ಪಕ್ಷಕ್ಕೆ ಅಧಿಕೃತ ವಿರೋಧಪಕ್ಷವೆಂದು ಮಾನ್ಯತೆ ನೀಡಿದ್ದೇನೆ ಹಾಗೂ ಕಾಂಗ್ರೆಸ್ (ಐ) ಶಾಸಕಾಂಗ ಪಕ್ಷದ ನಾಯಕರಾದ ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ ಅವರನ್ನು ವಿರೋಧಪಕ್ಷದ ನಾಯಕರೆಂದು ಮಾನ್ಯತೆ ನೀಡಿದ್ದೇನೆ.

8. ನಿಲುವಳಿ ಸೂಚನೆ ಮಂಡನೆಗೆ ಅನುಮತಿ ಕೋರಿಕೆ

ವಿಷಯ:- ಹೆಜ್ಜಾಲದಲ್ಲಿ ನಡೆದ ಗೋಲಿಬಾರ್‌ಗಳ ಬಗ್ಗೆ:-

ಅಧ್ಯಕ್ಷರು:- ಈಗ ನಿಲುವಳಿ ಸೂಚನೆಯನ್ನು ಹಲವಾರು ಸದಸ್ಯರು ಕೊಟ್ಟಿದ್ದೀರಿ, ಆ ಪೈಕಿ ಮೊದಲಿಗೆ ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಕಳುಹಿಸಿರುವುದನ್ನು ಈಗ ತೆಗೆದುಕೊಳ್ಳುತ್ತೇನೆ. ಖರ್ಗೆಯವರೇ, ಸೂಚನೆ ಮಂಡಿಸಿ.

12.30 ಪಿಎಂ

+ ಶ್ರೀ ಎಂ.ಸಿ. ನಾಣಯ್ಯ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು):- ಮಾನ್ಯ ಅಧ್ಯಕ್ಷರೆ, ದಿನಾಂಕ 3-7-96 ರಂದು ಹೆಜ್ಜಾಲದಲ್ಲಿ ವಳ್ಳಿಯಪ್ಪ ಟೆಕ್ಸ್‌ಟೈಲ್ ಕಾರ್ಖಾನೆ ಬಳಿ ಕಾರ್ಮಿಕರು ಹಾಗೂ ನಾಗರೀಕರು ಮೇಲೆ ಪೋಲೀಸರ ಗೋಲೀಬಾರ್ ಮತ್ತು ಅದಕ್ಕೆ ಸಂಬಂಧಪಟ್ಟ ಹಾಗೆ 3 ಜನರ ಮರಣ ಇದರ ಬಗ್ಗೆ ಇವರೆಲ್ಲರೂ ಇಲ್ಲಿ ಇಂದು ಪ್ರಶ್ನೆ ಎತ್ತಿದ್ದಾರೆ. ಮಾನ್ಯ ಅಧ್ಯಕ್ಷರೆ, ತಮಗೆ ಮತ್ತು ಎಲ್ಲರಿಗೂ ತಿಳಿದಿರುವ ಹಾಗೆ ಸರಕಾರ ಇದರ ಬಗ್ಗೆ ಈಗಾಗಲೇ ನಡೆದಿರತಕ್ಕಂತಹ ಗೋಲೀಬಾರ್‌ನಲ್ಲಿ ಆಗಿರತಕ್ಕಂತಹ ಕೊಲೆ ಇದಕ್ಕೆ ಸಂಬಂಧಪಟ್ಟ ಹಾಗೆ ನಾವು ನ್ಯಾಯಾಂಗ ತನಿಖೆಯನ್ನು ಮಾಡಬೇಕೆಂದು ಆಜ್ಞೆಮಾಡಿಯಾಗಿದೆ. ನ್ಯಾಯಾಂಗ ತನಿಖೆಗೆ ಆಜ್ಞೆ